# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 511 |
| ಸದಸ್ಯರ ಹೆಸರು | ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) |
| ಉತ್ತರಿಸಬೇಕಾದ ದಿನಾಂಕ | 11.12.2025 |
| ಉತ್ತರಿಸಬೇಕಾದ ಸಚಿವರು | ಮಾನ್ಯ ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಾಮಾನ್ಯ ಜನತೆಗೆ ಹಾಗೂ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಮನೋಭಾವವನ್ನು ತಿಳಿಯ ಪಡಿಸುವಲ್ಲಿ ವಿಶೇಷ ಪ್ರಯತ್ನಗಳನ್ನು ಮಾಡಿರುವ ಹಾಗೂ ಮಾಡುತ್ತಿರುವ ಸಾಧಕರ ವಿವರಗಳನ್ನು ಒದಗಿಸುವುದು: | ಸಾಮಾನ್ಯ ಜನತೆಗೆ ಹಾಗೂ ವಿದ್ಯಾರ್ಥಿಗಳಿಗೆ ವೈಜ್ಞಾನಿಕ ಮನೋಭಾವವನ್ನು ತಿಳಿಯ ಪಡಿಸುವಲ್ಲಿ ವಿಶೇಷ ಪ್ರಯತ್ನಗಳನ್ನು ಮಾಡಿರುವ ಹಾಗೂ ಮಾಡುತ್ತಿರುವ ಹಲವಾರು ಸಾಧಕರುಗಳಿದ್ದು, ಅವರಲ್ಲಿ ಪ್ರಮುಖರು:<br>1. ಪ್ರೊ. ಸರ್ ಸಿ. ವಿ. ರಾಮನ್<br>2. ಪ್ರೊ. ಸಿ.ಎನ್. ಆರ್. ರಾವ್<br>3. ಡಾ. ಹೆಚ್. ನರಸಿಂಹಯ್ಯ |
| ಆ) | ಇವರುಗಳ ಬಗ್ಗೆ ಸರ್ಕಾರ ಕಾರ್ಯ ಕ್ರಮಗಳನ್ನು ರೂಪಿಸಿ ಸಮಾಜದ ನಡುವೆ ಕೊಂಡೊಯ್ಯಲು ಸರ್ಕಾರದ ಕ್ರಮಗಳೇನು: | • ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಸರ್ ಸಿ. ವಿ. ರಾಮನ್ ರವರ ರಾಮನ್ ಎಫೆಕ್ಟ್ ಆವಿಷ್ಕಾರದ ಪರಿಣಾಮವಾಗಿ ಪ್ರತಿ ವರ್ಷ ಫೆಬ್ರವರಿ 28ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ಆಚರಿಸಲಾಗುತ್ತಿದೆ.<br>• ಸಾಧಕರಿಗೆ ಪ್ರೋತ್ಸಾಹ ನೀಡಲು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿಜ್ಞಾನಿಗಳಿಗೆ ಪ್ರೊ. ಸಿ. ಎನ್. ಆರ್. ರಾವ್ ಜೀವಮಾನ ಸಾಧನೆ ಪ್ರಶಸ್ತಿಯನ್ನು ನೀಡಿ ಗೌರವಿಸಲಾಗಿದೆ.<br>• ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ಡಾ. ಹೆಚ್. ನರಸಿಂಹಯ್ಯನವರ ಸ್ಮರಣಾರ್ಥವಾಗಿ ಅವರ ಹುಟ್ಟೂರಾದ ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನಲ್ಲಿ ಡಾ. ಹೆಚ್. ನರಸಿಂಹಯ್ಯ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲಾಗಿದೆ.<br>• ಡಾ. ಹೆಚ್. ನರಸಿಂಹಯ್ಯ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರವು ಹೊರಾಂಗಣ, ಒಳಾಂಗಣ, ವಿಷಯಾಧಾರಿತ ಗ್ಯಾಲರಿ, ವಿನೋದ ವಿಜ್ಞಾನ ಗ್ಯಾಲರಿಗಳನ್ನು ಹೊಂದಿದ್ದು, ಸದರಿ ಕೇಂದ್ರದ ವೀಕ್ಷಣೆಗೆ ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಜನಸಾಮಾನ್ಯರು ಭೇಟಿ ನೀಡುತ್ತಿದ್ದು, ಅದರ ಪ್ರಯೋಜನ ಪಡೆಯುತ್ತಿದ್ದಾರೆ. ಅಲ್ಲದೇ, ವಿದ್ಯಾರ್ಥಿಗಳು, ಶಿಕ್ಷಕರು ಹಾಗೂ ಜನಸಾಮಾನ್ಯರಲ್ಲಿ ವೈಜ್ಞಾನಿಕ ಮನೋಭಾವ, ವಿಚಾರಣೆಯನ್ನು ಬೆಳೆಸಲು ಸದರಿ ಕೇಂದ್ರದಿಂದ |

| | | |
|---|---|---|
| | | ಹಲವಾರು ವೈಜ್ಞಾನಿಕ ಕಾರ್ಯಕ್ರಮಗಳನ್ನು ಸಹ ಆಯೋಜಿಸಲಾಗುತ್ತಿದೆ. |
| ಇ) | ಬೆಂಗಳೂರು ಉಪಕುಲಪತಿಗಳಾಗಿದ್ದ ಮಾನ್ಯ ಹೆಚ್.ನರಸಿಂಹಯ್ಯರವರ ಬಗ್ಗೆ ಸರ್ಕಾರ ಯಾವ ಕಾರ್ಯ ಕ್ರಮಗಳನ್ನು ರೂಪಿಸಿದೆ? (ವಿವರ ಒದಗಿಸುವುದು) | ಬೆಂಗಳೂರು ಉಪಕುಲಪತಿಗಳಾಗಿದ್ದ ಮಾನ್ಯ ಹೆಚ್. ನರಸಿಂಹಯ್ಯರವರ ಕುರಿತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ ರೂಪಿಸಿರುವ ಕ್ರಮಗಳು:<br><br>1. ಡಾ. ಹೆಚ್. ನರಸಿಂಹಯ್ಯರವರ ಹುಟ್ಟೂರಿನಲ್ಲಿ ಡಾ. ಹೆಚ್. ನರಸಿಂಹಯ್ಯ ಉಪ-ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲಾಗಿದ್ದು, ಸದರಿ ಕೇಂದ್ರವು 2019 ರಿಂದ ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆ.<br>2. ವೈಜ್ಞಾನಿಕ ಮನೋಭಾವ, ವಿಚಾರಣೆಯನ್ನು ಬೆಳೆಸಲು ಮತ್ತು ಗ್ರಾಮೀಣ ವಿದ್ಯಾರ್ಥಿಗಳು ಚಟುವಟಿಕೆ ಆಧಾರಿತ ಪರಿಸರದ ಮೂಲಕ ವಿಜ್ಞಾನವನ್ನು ಕಲಿಯಲು ಅವಕಾಶವನ್ನು ಒದಗಿಸಲು ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕಿನ ಹೊಸೂರಿನಲ್ಲಿ ಡಾ. ಹೆಚ್. ನರಸಿಂಹಯ್ಯರವರ ಅಂತರಾಷ್ಟ್ರೀಯ ವಿಜ್ಞಾನ ಕೇಂದ್ರವನ್ನು ಸ್ಥಾಪಿಸಲಾಗುತ್ತಿದ್ದು, ಸದರಿ ಕೇಂದ್ರದ ಸ್ಥಾಪನೆಗೆ 132 ಎಕರೆ ಭೂಮಿಯನ್ನು ಮಂಜೂರು ಮಾಡಲಾಗಿದೆ. ಅಲ್ಲದೇ, ಕೇಂದ್ರದ ಸ್ಥಾಪನೆಗೆ ರೂ. 10.00 ಕೋಟಿಗಳ ಅನುದಾನವನ್ನು ಒದಗಿಸಲಾಗಿದ್ದು, ವಿವಿಧ ಕಾಮಗಾರಿಗಳು ಪ್ರಗತಿಯಲ್ಲಿವೆ.<br>3. 2025-26ನೇ ಆರ್ಥಿಕ ವರ್ಷದಲ್ಲಿ, ಡಾ. ಎಚ್. ನರಸಿಂಹಯ್ಯ ವಿಜ್ಞಾನ, ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಪ್ರವಾಸೋಧ್ಯಮ ಪ್ರಾಧಿಕಾರವನ್ನು ರಚಿಸಲಾಗಿದೆ. ಸದರಿ ಪ್ರಾಧಿಕಾರವು ಈ ಕೆಳಕಂಡ ಸಂಸ್ಥೆಗಳನ್ನು ಒಳಗೊಂಡಿದೆ.<br><br>• ಡಾ. ಹೆಚ್ ನರಸಿಂಹಯ್ಯ ವಿಜ್ಞಾನ ಕೇಂದ್ರ<br>• ಸ್ವಾತಂತ್ರ ಸ್ಮಾರಕ, ವೀರಸೌಧ, ವಿದುರಾಶ್ವತ್ಥ, ಗೌರಿಬಿದನೂರು ತಾಲ್ಲೂಕು.<br>• ಡಾ. ಹೆಚ್. ನರಸಿಂಹಯ್ಯ ಅವರ ಸ್ಮಾರಕವಾದ **'ಅಮರಧಾಮ' (Amaradhama)** ಗೌರಿಬಿದನೂರು ತಾಲ್ಲೂಕಿನ ಹೊಸೂರು.<br>• ಡಾ. ಬಿ.ಆರ್ ಅಂಬೇಡ್ಕರ್ ಅಧ್ಯಯನ ಕೇಂದ್ರ ಗೌರಿಬಿದನೂರು ತಾಲ್ಲೂಕು.<br>• ಡಾ. ಹೆಚ್.ಎನ್ ಕಲಾ ಭವನ ಗೌರಿಬಿದನೂರು ತಾಲ್ಲೂಕು. |

**ಐಟಿಬಿಟಿ 401 ಎಸ್ ಟಿಎಸ್ 2025**

(ಎನ್.ಎಸ್.ಭೋಸರಾಜು)
ಮಾನ್ಯ ಸಣ್ಣ ನೀರಾವರಿ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು.



File No. ITBT/401/STS/2025-SO ST-ITBT SEC (Computer No. 1977647)
Generated from eOffice by boseraju, S&T - MIN(BU), MINISTER, MINISTER - SCIENCE AND TECHNOLOGY on 09/12/2025 05:54 PM